


ಮಾಂಕು: ನಾನು ಮನೆಗೆ ಕಂಪ್ಯೂಟರ್ ತೆಗೆದುಕೊಂಡ ನಂತರ ಬೆಕ್ಕು ಸಾಕುವುದನ್ನು ನಿಲ್ಲಿಸಿದ್ದೇನೆ, ಯಾಕೆ ಹೇಳು?

ಸೋಂಪ: ಯಾಕೆಂದರೆ ಕಂಪ್ಯೂಟರಿನ ಮೌಸ್ ನಿನ್ನ ಮನೆ ಬೆಕ್ಕಿಗೆ ಹೆದರಿ ಓಡಿ ಹೋಗಬಾರದು, ಅಂತ.

★★★

ಹೋಟೆಲೊಂದರಲ್ಲಿ ಹಾಡುತ್ತಿದ್ದ ಸೋಂಪನಿಗೆ ಒಬ್ಬ ಸಾವಿರ ರೂಪಾಯಿ ಭಕ್ಷೀಸು ಜೊತೆಗೆ ಒಂದು ಚೀಟಿಯನ್ನೂ ಕೊಟ್ಟ.

ಯಾವುದೋ ಹೊಸಹಾಡು ಹಾಡಲು ಮನವಿ ಇರಬೇಕೆಂಬ ಉಮೇದಿನಿಂದ ಚೀಟಿ ನೋಡಿದರೆ ಅದರಲ್ಲಿ 'ದಯಮಾಡಿ ಹಾಡಿ ಕಿರಿಕಿರಿ ಮಾಡಬೇಡಿ ಮಾರಾಯ' ಎಂದು ಬರೆದಿತ್ತು.

★★★

ವಿಶಾಲಮ್ಮ, ನಿಮ್ಮ ಮಗಳಿಗೆ ಒಳ್ಳೆಯ ಕಡೆಯಿಂದ ಸಂಬಂಧ ನೋಡಿದ್ರಲ್ಲಾ. ಏನಾಯ್ತು?

ಹುಡುಗ ನಮ್ಮ ಮಗಳ ಫೋಟೋ ನೋಡಿ ಇಷ್ಟ ಆಗಲಿಲ್ಲ ಅಂತ ರಿಜೆಕ್ಟ್ ಮಾಡಿದ ಜಾನಕಿ.

ಯಾಕ್ರೀ ವಿಶಾಲಮ್ಮ? ನಿಮ್ಮ ಮಗಳು ದಂತದ ಬೊಂಬೆಯಂತೆ ಇದ್ದಾಳಲ್ಲ. ಅಂತಹ ಚಂದದ ಹುಡುಗಿಯನ್ನು ಜರಿದರೆ ಏನರ್ಥ?

ಅಯ್ಯೋ, ನಮ್ಮ ಯಜಮಾನ್ರು ಅವಸರದಲ್ಲಿ ಫೋಟೋ ಕಳುಹಿಸುವಾಗ ಅವಳ ಆಧಾರ್ ಕಾರ್ಡ್ ಪ್ರತಿ ಕಳುಹಿಸಿದ್ದಾರೆ ಕಣ್ರೀ..!

(ಸಂಗ್ರಹ) **ರಮೇಶ್ ಶೆಟ್ಟಿಗಾರ್**

